''ಇರಲಿ ಬಿಡಯ್ಯಾ ಪ್ರೊಫೆಸರ್, ಇದುವರೆಗೂ ಮನುಷ್ಯನ ಮನಸ್ಸನ್ನು ಯಾರೂ ನಿಖರವಾಗಿ ಡಿಫೈನ್ ಮಾಡಲಿಕ್ಕೆ ಆಗಿಲ್ಲ. ವಿಜ್ಞಾನ ದಕ್ಕಿಸಿಕೊಂಡ ಜ್ಞಾನದ ಪ್ರಕಾರ ಮನುಷ್ಯನ ಮೆದುಳಿನ ಶೇಕಡ ಎರಡರಿಂದ ಎರಡೂವರೆ ಭಾಗದಷ್ಟು ಮಾತ್ರ ಉಪಯೋಗಕ್ಕೆ ಬರುತ್ತದಂತೆ. ಜಗತ್ತಿನ ಅತ್ಯಂತ ಬುದ್ಧಿವಂತರೆನಿಸಿಕೊಂಡವರ ಮೆದುಳೂ ಮಾಕ್ಸಿಮಮ್ ಶೇಕಡ ಮೂರರಷ್ಟು ಮಾತ್ರ ಉಪಯೋಗವಾಗುತ್ತದಂತೆ. ಜಗತ್ತಿನ ಎಲ್ಲಾ ಥಿಯರಿಗಳು, ಸಿದ್ಧಾಂತಗಳು ಕಲ್ಪನೆಗಳ ಮತ್ತು ಅವುಗಳ ಪರೀಕ್ಷೆಗಳ ಆಧಾರದ ಮೇಲೆ ಕಟ್ಟಿದಂಥವುಗಳೇ. ಸೈಕಾಲಜಿಯ ಥಿಯರಿಗಳೂ ಅಷ್ಟೇ. ಅದಿರಲಿ, ಲಂಡನ್ನಿನಿಂದ ನನ್ನ ಫ್ರೆಂಡ್ ಮೃತ್ಯುಂಜಯ ಬೆಳಗ್ಗೆ ಎಂಟು ಗಂಟೆಗೆ ಫೋನ್ ಮಾಡಿದ್ದ. ನಿನ್ನ ಪಿಎಚ್.ಡಿ. ಸ್ಟೂಡೆಂಟ್ ನಿಧಿ ಅಲೆಗ್ಸಾಂಡರ್ ಬಗ್ಗೆ ತುಂಬಾ ಹೇಳಿದ...'' ನಾಗರಾಜ ಮೂರ್ತಿಯವರ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ, ''ಅರೆ, ಮೂರ್ತಿ ಎಂಥಾ ಕೋ ಇನ್ಸಿಡೆನ್ಸ್ ನೋಡು. ಅನೇಕ ವರ್ಷಗಳ ನಂತರ ನಿನ್ನೆ ಯಾವುದೋ ವಿಷಯಕ್ಕೆ ಅವಳನ್ನು ತುಂಬಾ ನೆನಪು ಮಾಡಿಕೊಂಡೆ. ರಾತ್ರಿ ಕೂಡಾ ನೆನಪಾದಳು. ಲಂಡನ್ನಿನಲ್ಲಿದ್ದಾಳಂತಾ, ಪಿಎಚ್.ಡಿ. ಅವಾರ್ಡ್ ಆದ ಮೇಲೆ ಅಡ್ರೆಸ್ಸು, ಫೋನ್ ನಂಬರ್ ಏನೂ ಕೊಟ್ಟಿರಲಿಲ್ಲ. ತುಂಬಾ ಮಹತ್ವಾಕಾಂಕ್ಷಿಯಾಗಿದ್ದಳು. ಹೇಗಿದ್ದಾಳಂತೆ ಈಗ.'' ಕುತೂಹಲದಿಂದ ಕೇಳಿದ್ದರು ಋಗ್ವೇದಿ. ''ನೀನು ತುಂಬಾ ಕ್ಲೋಸಾಗಿ ಮೂವ್ ಆಗ್ತಿದ್ದೆ. ಯೂನಿವರ್ಸಿಟಿಲಿ ನಿನ್ನ ಮತ್ತು ಅವಳ ಬಗ್ಗೆ ಏನೇನೋ ಕೆಟ್ಟದ್ದಾಗಿ ಮಾತನಾಡಿಕೊಳ್ತಿದ್ರು. ನಿಜಾನ ಹೇಳು.'' ನಾಗರಾಜ ಮೂರ್ತಿಯವರ ಮಾತುಗಳಿಗೆ ಸ್ವಲ್ಪ ಗಲಿಬಿಲಿಗೊಂಡ ಋಗ್ವೇದಿ, ''ಏನು ಹೇಳ್ಬೇಕು ಅಂತ ತೋಚ್ತ ಇಲ್ಲ ಮೂರ್ತಿ. ನೀನು ಹೇಳಿದ್ದು ನಿಜಾನೆ. ಅದಕ್ಕೇ ನಾನು ಕೇಳ್ತಿರೋದು ಮನಸ್ಸು ಎಂಬ ವಸ್ತು ಹೇಗಿರ್ತದೆ ಮತ್ತು ದೇಹದ ಎಲ್ಲಾ ಪಾರ್ಟುಗಳಲ್ಲೂ ಅದು ಸಂಚರಿಸುತ್ತದಾ ಎಂದು.'' ಋಗ್ವೇದಿಯವರ ಮಾತುಗಳು ಮೆತುವಾದವು.

ಅಷ್ಟರಲ್ಲಿ ರಿಸಿಪ್ಷನಿಸ್ಟ್ ಮಾವಿನ ಹಣ್ಣನ್ನು ಕೊಯ್ದು ಒಂದು ತಟ್ಟೆ ತುಂಬಾ ತಂದಿಟ್ಟಿದ್ದಳು. ''ನಮ್ಮ ತೋಟದ್ದೇ ತಗೊಳಯ್ಯಾ ಪ್ರೊಫೆಸರ್. ಆರ್ಗಾನಿಕ್ ಹಣ್ಣು, ಕೆಮಿಕಲ್ ಫ್ರೀ...'' ಎಂದು ಹಣ್ಣಿನ ಹೋಳನ್ನು ಬಾಯಿಗಿಟ್ಟುಕೊಂಡಿದ್ದರು ನಾಗರಾಜ ಮೂರ್ತಿ. ಋಗ್ವೇದಿಯವರು ಕೂಡಾ ಹಣ್ಣನ್ನು ಬಾಯಿಗಿಟ್ಟುಕೊಂಡು, ''ತುಂಬಾ ಚನ್ನಾಗಿದೆ ಮೂರ್ತಿ, ಅಂತೂ ಕೆಮಿಸ್ಟ್ರಿ ಪ್ರೊಫೆಸರಿಗೆ ಕೆಮಿಕಲ್ ಫ್ರೀ ಹಣ್ಣು ತಿನ್ನಿಸ್ತಾ ಇದೀಯ. ಕೆಲವು ಕೆಮಿಕಲ್ಸ್ ಜೀವ ಜಂತುಗಳನ್ನು ಬದುಕಿಸಿದರೆ, ಕೆಲವು ಕೊಲ್ಲುತ್ತವೆ. ಅದಿರಲಿ ನಿನ್ನ ಫ್ರೆಂಡ್ ಮೃತ್ಯುಂಜಯ ನಿಧಿ ಅಲೆಗ್ಸಾಂಡರ್ ಬಗ್ಗೆ ಇನ್ನೇನು ಹೇಳ್ದ.'' ಎಂದೋ ಸುಖ ನೀಡಿದ್ದ ದೇಹದ ಬಗ್ಗೆ ಎಷ್ಟೊಂದು ಕುತೂಹಲ! ದೇಹಗಳಿಂದಲೇ ಮನಸ್ಸುಗಳು ಸುಖ, ಸಂತೃಪ್ತಿಗಳನ್ನು ಪಡೆಯುವುದು ಮತ್ತು **vice versa.**'' ನಿನ್ನೆ ಸಂಜೆ ನಾಲ್ಕು ಗಂಟೇಲೀ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳಂತೆ. ಪೊಲೀಸರು ಅವಳ ಅಮೆರಿಕನ್ ಗಂಡನ್ನ ಅರೆಸ್ಟ್ ಮಾಡಿದ್ದಾರಂತೆ. ತಂದೆ ತಾಯಿ ಮತ್ತು ಅಣ್ಣ ಅಲ್ಲೇ ಇರೋದ್ರಿಂದ ಇವೊತ್ತು ಹನ್ನೆರಡು ಗಂಟೆಗೆ ಅಲ್ಲೆ ಲಂಡನ್ನಿನಲ್ಲೆ ಶವ ಸಂಸ್ಕಾರ ಮಾಡ್ತಾರಂತೆ. ಫಾರ್ಮಸಟಿಕಲ್ ಕಂಪನಿ ಓಪನ್ ಮಾಡಿ ತುಂಬಾ ಚನ್ನಾಗಿ ಬಿಸಿನೆಸ್ ಎಸ್ಟಾಬ್ಲಿಷ್ ಮಾಡಿದ್ಲಂತೆ. ನೀನು ಇವೊತ್ತು ಇಲ್ಲಿಗೆ ಬಂದಿದ್ದರಿಂದ ಈ ವಿಷಯ ಹೇಳ್ದೆ. ಇಲ್ಲದೆ ಇದ್ದಿದ್ರೆ ಮರೆತೇ ಹೋಗುತ್ತಿತ್ತು ನೋಡು.'' ಎಂದು ಕೊನೆಯ ಮಾವಿನ ಹಣ್ಣಿನ ಪೀಸನ್ನು ಬಾಯಿಗಿಟ್ಟುಕೊಂಡಿದ್ದರು. ಕ್ಷಣ ಬೆಚ್ಚಿಬಿದ್ದ ಋಗ್ವೇದಿ, ''ಆತ್ಮಹತ್ಯೆ ಮಾಡಿಕೊಳ್ಳೋಕೆ ಏನೆಲ್ಲಾ ಮಾರ್ಗೋಪಾಯಗಳಿದ್ದರೂ ಅನಾದಿ ಕಾಲದಿಂದ ಇವೊತ್ತಿನವರೆಗೂ ಜಗತ್ತಿನಾದ್ಯಂತ ಜನ ನೇಣಿಗೆ ಶರಣಾಗುವುದು ಏತಕ್ಕೊ.'' ಸಾವರಿಸಿಕೊಂಡು ನುಡಿದಿದ್ದರು. ''ಆತ್ಮಹತ್ಯೆ ಯಾವಾಗಲೂ ಸಡನ್ ತೀರ್ಮಾನ ಆಗಿರುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ಮೊದಲು ಪ್ರಿಪರೇಶನ್ ಮಾಡಿಕೊಂಡಿರುತ್ತಾನೆ. ಅಂಥ ಪ್ರಿಪರೇಶನ್ ಮಾಡಿಕೊಂಡವರು ನೇಣಿಗೆ